**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂ.ಬೆಸವಿ/ಜಿಲ್ಲಾ-ಜಕೃನಿ-ಪತ್ರ-13/2022-23

ಕೃಷಿ ಆಯುಕ್ತಾಲಯ,
ಶೇಷಾದ್ರಿರಸ್ತೆ, ಬೆಂಗಳೂರು-01,
ದಿನಾಂಕ:15-09-2022.

**ಸುತ್ತೋಲೆ-3**

ವಿಷಯ: 2022-23ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ದಿನಾಂಕ: 05.09.2022 ರಂದು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಉಪಸ್ಥಿತಿಯಲ್ಲಿ ಹಾಗೂ ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಿದಂತೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಸಿದಂತೆ, 2022-23ನೇ ಸಾಲಿನ ಬೆಳೆ ಸಮೀಕ್ಷೆ ಯೋಜನೆಯಡಿ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು ಈಗಾಗಲೇ ಸರ್ಕಾರದ ಅನುಮತಿ ಪಡೆದಿದ್ದು ಅದರ ಮುಂದುವರೆದ ಭಾಗವಾಗಿ ಪೂರ್ವ ಮುಂಗಾರು ಹಂಗಾಮಿನ ಸಮೀಕ್ಷೆ ಕಾರ್ಯವನ್ನು ಈಗಾಗಲೇ ತಮ್ಮ ಸಹಕಾರದಿಂದ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿರುತ್ತದೆ. ಮುಂದುವರೆದು, ಬೆಳೆ ಸಮೀಕ್ಷೆ ಅನುಷ್ಠಾನದ ಸಮಯದಲ್ಲಿ ಪ್ರಚಾರ, ಖಾಸಗಿ ನಿವಾಸಿಗಳಿಂದ ಸಮೀಕ್ಷೆ, ಮೇಲ್ವಿಚಾರಕರ ಪರಿಶೀಲನೆ, ಸಂಬಂಧಪಟ್ಟಂತೆ ವಿವಿಧ ಹಂತಗಳಲ್ಲಿ ನಡೆಸುವ ಸಭೆಗಳು ಮತ್ತು ಇತರೆ ಅಗತ್ಯ ವಿಷಯಗಳಲ್ಲಿ ಕೃಷಿ ಮತ್ತು ಸಂಬಂಧಿತ ಇಲಾಖೆಗಳ ಪಾಲ್ಗೊಳ್ಳುವಿಕೆ ಮತ್ತು ಸಮನ್ವಯತೆ ಪ್ರಮುಖವಾಗಿರುತ್ತದೆ. ಈ ನಿಟ್ಟಿನಲ್ಲಿ, ತಮ್ಮ ಜಿಲ್ಲೆಯಲ್ಲಿ ಉತ್ತಮವಾದ ಬೆಳವಣಿಗೆ ಇರುವುದು ಸಂತಸದ ವಿಷಯವಾಗಿರುತ್ತದೆ.

ಮುಂದುವರೆದು, ಉಲ್ಲೇಖಿತ ಸಭೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡಂತೆ ದಿನಾಂಕ: 05.09.2022 ರಂದು ನಡೆದ ವಿಡಿಯೊ ಸಂವಾದ ಕಾರ್ಯಕ್ರಮದಲ್ಲಿ ಬೆಳೆ ಸಮೀಕ್ಷೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರಸ್ತುತ ಈ ಕೆಳಕಂಡಂತೆ ತಿಳಿಸಿರುವ ತೊಡಕುಗಳ ಕುರಿತು ಪ್ರಸ್ತಾಪಿಸಲಾಗಿರುತ್ತದೆ.

1. ಬೆಳೆ ಸಮೀಕ್ಷೆಯ ರೈತರ ಮೊಬೈಲ್ ಆಪ್ ಕುರಿತು ರೈತರಲ್ಲಿ ಅರಿವನ್ನು ಮೂಡಿಸಲು ಕೃಷಿ ಇಲಾಖೆಯು ಹೆಚ್ಚಿನ ಜವಾಬ್ದಾರಿಯನ್ನು ವಹಿಸುತ್ತಿದ್ದು, **ಇತರೆ ಸಂಬಂಧಿತ ಇಲಾಖೆಗಳಾದ ಕಂದಾಯ, ತೋಟಗಾರಿಕೆ, ರೇಷ್ಮೆ, ಸಾಂಖ್ಯಿಕ ಮತ್ತು ಇತರೆ ಇಲಾಖೆಗಳ ಪರಿಣಾಮಕಾರಿಯಾಗಿ ಭಾಗವಹಿಸುತ್ತಿರುವ ಕುರಿತು ಉಸ್ತುವಾರಿ ವಹಿಸುವುದು**.
2. **ರೈತರ ಹಾಗೂ ಖಾಸಗಿ ನಿವಾಸಿಗಳ ಬೆಳೆ ಸಮೀಕ್ಷೆ, ಪ್ರಗತಿ, ಮೇಲ್ವಿಚಾರಕರ ಪರಿಶೀಲನೆ, ಮರುಸಮೀಕ್ಷೆ, ಬೆಳೆ ದರ್ಶಕ್ ಆಪ್ ಪರಿಣಾಮಕಾರಿ ಅನುಷ್ಠಾನದಲ್ಲಿ** ನೋಡಲ್ ಇಲಾಖೆಯ ಜೊತೆಗೆ ಕ್ರಮ ಸಂಖ್ಯೆ 1 ರಲ್ಲಿ ತಿಳಿಸಿರುವ ಸಂಬಂಧಿತ ಇಲಾಖೆಗಳ ಭಾಗವಹಿಸುವಿಕೆಯನ್ನು ಉಸ್ತುವಾರಿ ಮಾಡುವುದು.
3. ಮೇಲ್ವಿಚಾರಕರ ಪರಿಶೀಲನೆ ಕಾರ್ಯವನ್ನು ಸಕಾಲದಲ್ಲಿ ಪೂರ್ಣಗೊಳಿಸದೇ ಇರುವುದರಿಂದ ಖಾಸಗಿ ನಿವಾಸಿಗಳಿಗೆ ಸಮೀಕ್ಷೆಗೆ ಅನುಗಣವಾಗಿ ಗೌರವಧನದ ಪಾವತಿ ಕಷ್ಟಸಾಧ್ಯವಾಗಿರುತ್ತದೆ ಹಾಗೂ ಕೆಲವು ಅಧಿಕಾರಿಗಳು (ಮೇಲ್ವಿಚಾರಕರು) ತಮ್ಮ Login credentials ಗಳನ್ನು ಇತರರಿಗೆ ನೀಡಿ ಅವರುಗಳು ಸಮೀಕ್ಷೆಯ ದತ್ತಾಂಶವನ್ನು ಸರಿಯಾಗಿ ಪರಿಶೀಲಿಸದೆ ಹಲವು ತಪ್ಪುಗಳನ್ನು ಮಾಡುತ್ತಿರುವುದರಿಂದ ರೈತರಿಂದ ಆಕ್ಷೇಪಣೆಗಳು ಬರುತ್ತಿದ್ದು **ಸೂಕ್ತ ರೀತಿಯಲ್ಲಿ ಪರಿಶೀಲಿಸಿದ ನಂತರ ಮೇಲ್ವಚಾರಕರೇ ಅನುಮೋದಿಸುವುದು** ಸೂಕ್ತವೆನಿಸಿದೆ ಹಾಗೂ ಈ ಸಂಬಂದ ಹೆಚ್ಚಿನ ಪ್ರಕರಣಗಳು ತಮ್ಮ ಇಲಾಖೆಯ ಗ್ರಾಮ ಲೆಕ್ಕಿಗರಿಗೆ ಅನ್ವಯವಾಗುವಂತೆ

ವರದಿಯಾಗುತ್ತಿರುವ ನಿಟ್ಟಿನಲ್ಲಿ ಹಾಗೂ ಸದರಿ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಕಾರಣ ಹೆಚ್ಚಿನ **ಮುತುವರ್ಜಿ ವಹಿಸುವುದು ಅಗತ್ಯವಿರುತ್ತದೆ**.

4. ಬೆಳೆ ಸಮೀಕ್ಷೆ ಮಾರ್ಗಸೂಚಿಗಳನ್ವಯ ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಇರುವ ಬೆಳೆ ಸಮೀಕ್ಷೆ **ಅನುಷ್ಠಾನ ಸಮಿತಿಯ ಸಭೆಗಳನ್ನು ಅವಶ್ಯಕತೆಗನುಸಾರವಾಗಿ ಕಾಲಕಾಲಕ್ಕೆ ಏರ್ಪಡಿಸಿ ಬೆಳೆ ಸಮೀಕ್ಷೆ ಕಾರ್ಯಕ್ರಮವನ್ನು** ಉತ್ತಮಪಡಿಸುವ ನಿಟ್ಟಿನಲ್ಲಿ ಯಾವುದಾದರೂ ಬದಲಾವಣೆಗಳು ಅಥವಾ ಸಲಹೆಗಳಿದ್ದಲ್ಲಿ ಸೂಕ್ತ ಸಭಾ ನಡವಳಿಗಳೊಂದಿಗೆ ಈ ಕಚೇರಿಗೆ ಸಲ್ಲಿಸುವುದು.
5. 2017 ನೇ ಸಾಲಿಗೂ ಮೊದಲ ದಿನಗಳಲ್ಲಿ ಬೆಳೆ ವಿವರಗಳನ್ನು ಪಹಣಿ (RTC) ಗಳಲ್ಲಿ ಕೈಯಿಂದ ಬರೆಯಲಾಗುತ್ತಿದ್ದ ಕಾರಣ ಹೆಚ್ಚಿನ ಸಮಯವಕಾಶ ಅಗತ್ಯವಿತ್ತು ಆದರೆ ಪ್ರಸ್ತುತ ಪ್ರತಿ ಹಂಗಾಮಿನಲ್ಲಿ ಕೈಗೊಂಡ ಬೆಳೆ ಸಮೀಕ್ಷೆಯ ವಿವರಗಳು ಆಯಾ ಹಂಗಾಮು ಮುಕ್ತಾಯಗೊಂಡ 1 ಅಥವಾ 2 ತಿಂಗಳಿನೊಳಗೆ ಪಹಣಿ (RTC) ಗಳಲ್ಲಿ ಬರುತ್ತಿರುವುದರಿಂದ ಸಮಯದ ಉಳಿತಾಯವಾಗಿದ್ದು **ಸದರಿ ಅಧಿಕಾರಿಗಳು ಸರ್ಕಾರದ ಪ್ರಮುಖ ಕಾರ್ಯಕ್ರಮಗಳ ಅನುಷ್ಠಾನಕ್ಕಕೆ ಅಗತ್ಯವಾಗಿ ಬೇಕಾದ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಅಗತ್ಯಕ್ಕೆ ಅನುಸಾರವಾಗಿ ತೊಡಗಿಸಿಕೊಳ್ಳುವುದು ಅನಿವಾರ್ಯವೆನಿಸಿದೆ**.

ಈ ಹಿನ್ನೆಲೆಯಲ್ಲಿ, ಉಲ್ಲೇಖಿತ ಸಭೆಯಲ್ಲಿ ಮೇಲಿನಂತೆ ಪ್ರಸ್ತಾಪಿಸಲಾಗಿರುವ ವಿಷಯಗಳ ಕುರಿತು ಜಿಲ್ಲೆಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಬೆಳೆ ಸಮೀಕ್ಷೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮ ಅಗತ್ಯ ಸಹಕಾರವನ್ನು ಈ ಮೂಲಕ ಕೋರಿದೆ.

ಕೃಷಿ ಆಯುಕ್ತರು

ಇವರಿಗೆ,

ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು

ಪ್ರತಿಯನ್ನು ಎಲ್ಲಾ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕಳುಹಿಸುತ್ತಾ, ಬೆಳೆ ಸಮೀಕ್ಷೆ ಮಾರ್ಗಸೂಚಿಗಳನ್ವಯ ಜಿಲ್ಲಾಧಿಕಾರಿಗಳ ಸಮನ್ವಯದೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಇರುವ ಬೆಳೆ ಸಮೀಕ್ಷೆ ಅನುಷ್ಠಾನ ಸಮಿತಿಯ ಸಭೆಗಳನ್ನು ಅವಶ್ಯಕತೆಗನುಸಾರವಾಗಿ ಕಾಲಕಾಲಕ್ಕೆ ಏರ್ಪಡಿಸಿ ಅದಕ್ಕೆ ಸಂಬಂದಿಸಿದಂತೆ ಸೂಕ್ತ ಸಭಾ ನಡವಳಿಗಳನ್ನು ಈ ಕಚೇರಿಗೆ ಸಲ್ಲಿಸುವುದು ಮತ್ತು ಮೇಲಿನ ಅಂಶಗಳ ಕುರಿತು ಜಿಲ್ಲಾಧಿಕಾರಿಗಳ ಗಮನವನ್ನು ಸೆಳೆಯಲು ಕ್ರಮಕೈಗೊಳ್ಳುವಂತೆ ಸೂಚಿಸಿದೆ.